ಶ್ರೀ ಎಚ್. ಸಿದ್ಧವೀರಪ್ಪ:—Health includes medical aid also. ಆದ್ದರಿಂದ ಹೆಲ್ತ್ ಅಂಡ್ ಸ್ಯಾನಿಟೇಷನ್ ಎರಡೂ ಸಹ ಕಾರ್ಪೋರೇಷನ್ನಿಗೆ ಸೇರಿದ್ದು. ಈಗ ಹೆಲ್ತ್‌ಸೆಸನ್ನು ಕಾರ್ಪೋರೇಷನ್ ಅವರೇ ತೆಗೆದುಕೊಳ್ಳುತ್ತಿದ್ದಾರೆ. ಇದು ನಮ್ಮ ಜವಾಬ್ದಾರಿಯಲ್ಲ ಎಂಬುದಾಗಿ ಇದುವರೆಗೆ ಕಾರ್ಪೋರೇಷನ್ ಅವರು ನಮಗೆ ತಿಳಿಸಿಲ್ಲ. ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಸರ್ಕಾರದವರು ಈಗ ಬೆಂಗಳೂರಿನಲ್ಲಿ ಮೂರು ಜನರಲ್ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ನಮ್ಮಲ್ಲಿರತಕ್ಕಂಥ ಅಲ್ಪ ಹಣದಲ್ಲಿ ನಾವು ಇನ್ನು ಮುಂದೆ ಹಳ್ಳಿಗಳ ಕಡೆಗೆ ಗಮನ ಕೊಡಬೇಕಾಗಿದೆ. ಪಟ್ಟಣಗಳ ಕಡೆಗೆ ಗಮನ ಕೊಡುವುದಕ್ಕಿಂತ ಹೆಚ್ಚಾಗಿ ಇನ್ನು ಮುಂದೆ ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು ತೆರೆಯುವ ಕಡೆಗೆ ಗಮನ ಕೊಡುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ:—ರ್ಜಿಲೇನೇ ಇಸವಿಯಿಂದಲೂ ಕಾರ್ಪೋರೇಷನ್‌ನವರು ತಾವೇ ಇದನ್ನು ಕೈಕೊಳ್ಳುತ್ತೇವೆಂದು ಹೇಳುತ್ತಿದ್ದಾರೆಂದು ತಾವು ಅಪ್ಪಣೆ ಕೊಡಿಸಿದಿರಿ, ರ್ಜಿಲೇನೇ ಇಸವಿಯಲ್ಲಿ ಕಾರ್ಪೋರೇಷನ್ ಸರ್ಕಾರದ ಕೈಯಲ್ಲಿದ್ದೇ ಇತ್ತು. ಆಗ ಜನರ ಪ್ರತಿನಿಧಿಗಳು ಇರಲಿಲ್ಲ. ಆ ಸಮಯದಲ್ಲಿ ಸರ್ಕಾರದವರು ಇದರ ಕಡೆಗೆ ಏತಕ್ಕೆ ಗಮನ ಕೊಡಲಿಲ್ಲ ?

ಶ್ರೀ ಎಚ್. ಸಿದ್ಧವೀರಪ್ಪ:—ಆಗಿನ ಸರ್ಕಾರದ ಅಡ್ಮಿನಿಸ್ಟ್ರೇಟರ್ ಕೂಡ ಈ ಬಗ್ಗೆ ನೋಡುತ್ತೆವೆಂದು ಸರ್ಕಾರಕ್ಕೆ ಹೇಳಿದ್ದರು. ಆದರೆ ಮಾಡಲಿಲ್ಲ. ಈಗ ಕಾರ್ಪೋರೇಷನ್ ಅಸ್ಥಿತ್ವದಲ್ಲಿದೆ. ಅವರನ್ನೂ ಕೇಳಿದ್ದೇವೆ. ಈಗ ಮತ್ತೊಂದು ಸಲ ಇದರ ಅವಶ್ಯಕತೆ ಜಾಸ್ತಿ ಇದೆ, ತ್ವರಿತವಾಗಿ ಮಾಡಬೇಕೆಂಬುದಾಗ್ಗಿ ಬರೆಯುತ್ತೇನೆ. ಮಂತ್ರಿ ಸಂಬಂಧಪಟ್ಟ ಮಂತ್ರಿಗಳಿಗೂ ಒರೆಯುತ್ತೇನೆ.

CASH AWARD TO GOVERNMENT SERVANTS FOR PASSING HINDI EXAMINATION

425. SRI ANDANAIAH (Kunigal) .—

Will the Chief Minister be pleased to state :—

(*a*) whether there is any Government Order for granting cash awards of Rs. 100 to Government servants who have passed "Praveshika" Hindi Examination ,

(*b*) if so, the aim and purpose of the said Government Order ,

(*c*) the reasons for not giving the said awards to the Government officials who have passed the said examination prior to the issue of said Government Order ,

(*d*) the number of Government servants who have passed the requisite Hindi Examination after the issue of Government Order and the total number of Government servants who had passed the Hindi Examination prior to the issue of Government Order ,

the number of Government servants who had passed "Praveshika" in the first class prior to the issue of present Government Order and have been granted advance increments ?

SRI D. DEVARAJ URS (Chief Minister) .—

(*a*) Yes.

(*b*) To encourage and popualarise Hindi among Government servants.

(*c*) It has been decided not to extend the benifit to those who have passed the Examination prior to 1-10-1968 since this would create a precedent for similar other cases of examinations,

(*d*) and (*e*) Not readily available. (It will take quite some time to collect the statistics).

ಶ್ರೀ ಆಂದಾನಯ್ಯ : (ಇ) ಪ್ರಶ್ನೆಗೆ ಉತ್ತರವಾಗಿ ತಾ॥ ೧-೧೦-೧೯೬೮ಕ್ಕೂ ಮುಂಚೆ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಈ ಪ್ರಯೋಜನವನ್ನು ವಿಸ್ತರಿಸಬಾರದೆಂದು ನಿರ್ಧರಿಸಲಾಗಿದೆ ಎಂದು ಹೇಳಿದ್ದೀರಿ. ಹಿಂದಿ ಭಾಷೆ ರಾಷ್ಟ್ರಭಾಷೆಯಾಗಿರುವುದರಿಂದ, ಆದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದಕ್ಕೋಸ್ಕರ ತಾ॥ ೧-೧೦-೧೯೬೮ಕ್ಕೂ ಮುಂಚೆ ಪಾಸ್ ಮಾಡಿದ ಎಲ್ಲಾ ನೌಕರರಿಗೂ ಈ ಪ್ರಯೋಜನವನ್ನು ಒದಗಿಸಿಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ :—ಈಗ ಯೋಚನೆ ಮಾಡಿರುವ ಪ್ರಕಾರ ಕಲಿಯದೇ ಇರುವವರು ಕಲಿತರೆ ಕೊಡೋಣ ಎಂದಿದೆ ಅಷ್ಟೆ.

SRI B. B. SAYANAK :— I know how many Government servents got the benefit of this cash award of Rs. 100/-?

SRI D. DEVARAJ URS That figures is not available.

ಶ್ರೀ ಸಿ. ಟಿ. ಗುಡ್ಡಕಾಯಿ .— ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳು ಹಿಂದಿ ಪ್ರವೇಶಿಕಾ ಪರೀಕ್ಷೆಯಲ್ಲಿ ಪಾಸ್ ಮಾಡಿದರೆ, ಅಂತಹವರು ಹೈಸ್ಕೂಲಿನಲ್ಲಿ ಹಿಂದಿ ಶಿಕ್ಷಕರಾಗಿ ಕೆಲಸ ಮಾಡಬಹುದೆಂದು ಸರ್ಕಾರ ನಿರ್ಧರಿಸಿ ಆ ಬಗ್ಗೆ ಒಂದು ಪಟ್ಟಿಯನ್ನು ಸಹ ತಯಾರಿಸಲಾಗಿತ್ತು. ಆದರೆ ಅದು ಇನ್ನೂ ಕೃತಿಯಲ್ಲಿ ಬಂದಿಲ್ಲ. ಆ ರೀತಿ ವಿಳಂಬವಾಗುವುದಕ್ಕೆ ಕಾರಣವೇನು ?

SRI D. DEVARAJ URS .— That question does not arise out of this

ಶ್ರೀ ಡಿ. ಹಲಗೇಗೌಡ. — ಹಿಂದಿ ಭಾಷೆ ಕಲಿಯುವವರಿಗೆ ೧೦೦ ರೂಪಾಯಿಗಳ ಬಹುಮಾನ ಕೊಡುತ್ತಿರುವಂತೆ ಕನ್ನಡ ಬರದವರು ಕನ್ನಡ ಕಲಿತರೆ ಅಂತಹವರಿಗೂ ೧೦೦ ರೂಪಾಯೀಗಳನ್ನು ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ .—ಕನ್ನಡವನ್ನು ಕಲಿಯಲೇಬೇಕು. ಆದರೆ ಹಿಂದಿಯನ್ನು ಕಲಿಯಲೇ ಬೇಕೆಂಬ ಕಡ್ಡಾಯವಿಲ್ಲ. ಆದರೆ ಅದನ್ನು ಕಲಿಯಲು ಉತ್ತೇಜನ ಕೊಡುವುದಕ್ಕೋಸ್ಕರ ಈ ರೀತಿ ಸರ್ಕಾರ ಮಾಡಿದೆ.

ಶ್ರೀ ಕೋಣಂದೂರು ಲಿಂಗಪ್ಪ .— ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇಬೇಕೆಂಬುದು ಸರ್ಕಾರದ ನೀತಿಯೇ ?

ಅಧ್ಯಕ್ಷರು : ಹೌದು ಎಂದು ಹೇಳಿದ್ದಾರೆ. ಪ್ರಶ್ನೋತ್ತರ ಕಾಲ ಮುಗಿಯಿತು.